
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI






ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 1 Reg. No. : KARBIL / 2005 / 16123 ಜನವರಿ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 1 ಪ್ರಕಟಣೆ : 20-01-2024


## ‘ಶಿವಸದನ’ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯಕ್ಕೆ ಎಂ.ಆರ್.ಪಿ.ಎಲ್. ಕೊಡುಗೆ






ಚಿತ್ರ : ಶ್ರೀ ರಘುವೀರ್ ಪೆರ್ಡೂರ್

ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪುತ್ತೂರಿನ ಮುರದಲ್ಲಿ ನಡೆಸಲ್ಪಡುವ ‘ಶಿವಸದನ’ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯಕ್ಕೆ ಎಂ.ಆರ್.ಪಿ.ಎಲ್.ನ ಸಿ.ಎಸ್.ಆರ್. (CSR) ಫಂಡ್‌ನಿಂದ ಕೊಡಮಾಡಲ್ಪಟ್ಟ ಸೌರವಿದ್ಯುತ್ ಉತ್ಪಾದನಾ ಘಟಕದ ಉದ್ಘಾಟನಾ ಕಾರ್ಯಕ್ರಮವು ತಾರೀಕು 27-12-2023ನೇ ಬುಧವಾರ ನಡೆಯಿತು. ಎಂ.ಆರ್.ಪಿ.ಎಲ್.ನ ಕಾರ್ಯನಿರ್ವಾಹಕ ನಿರ್ದೇಶಕರಾದ (ಪ್ರಾಜೆಕ್ಟ್) ಶ್ರೀ ಬಿ.ಎಚ್.ವಿ. ಪ್ರಸಾದ್ ಪಿ.ಪಿ.ಟಿ. ಪ್ರದರ್ಶನ ಚಾಲನೆ ಮತ್ತು ಕೊಡುಗೆಯ ನಾಮಫಲಕ ಅನಾವರಣಗೊಳಿಸಿ ಉದ್ಘಾಟನೆಯನ್ನು ನೆರವೇರಿಸಿದರು. ಬಳಿಕ ನಡೆದ ಸಭಾಕಾರ್ಯಕ್ರಮದಲ್ಲಿ ಕು। ಗಾನ ಪಿಲಿಂಜ ಪ್ರಾರ್ಥನೆಯನ್ನು ನೆರವೇರಿಸಿದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಅಭ್ಯಾಗತರನ್ನು ಸ್ವಾಗತಿಸಿದರು. ಯೋಜನೆಯ ಬಗ್ಗೆ ಪ್ರಸ್ತಾವನೆಯನ್ನು ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ನಡೆಸಿದರು. ಅತಿಥಿಗಳಾದ ಶ್ರೀ ಶೈಲೇಶ್ ಆರ್. ರಾವ್, ನಿವೃತ್ತ ಪ್ರಧಾನ ವ್ಯವಸ್ಥಾಪಕರು ಎಚ್.ಪಿ.ಸಿ.ಎಲ್. ಶ್ರೀ ಕಾರ್ತಿಕ್ ಗಿನಕಲ್, ಮಾರಾಟ ವ್ಯವಸ್ಥಾಪಕರು, ಟಾಟಾ ಸೋಲಾರ್, ಶ್ರೀ ದರ್ಶನ್ ಹೆಗ್ಡೆ, ಮಾರಾಟ ನಿರ್ವಾಹಕರು, ಟಾಟಾ ಸೋಲಾರ್ ಶುಭಾಸಂಶನೆಗೈದರು.

ಉದ್ಘಾಟಕರಾದ ಶ್ರೀ ಬಿ.ಎಚ್.ವಿ. ಪ್ರಸಾದ್ ‘ನಮ್ಮ ಸಂಸ್ಥೆಯು ಇಂತಹ ಸಮಾಜಮುಖೀ ಕಾರ್ಯಕ್ರಮಗಳಿಗೆ ನಿಧಿಗಳನ್ನು ನೀಡಲು ಹೆಮ್ಮೆಪಡುತ್ತದೆ. ದೇಶದ ಆರ್ಥಿಕತೆಯಲ್ಲೂ ದೊಡ್ಡ ಕೊಡುಗೆಯನ್ನು ನಮ್ಮ ಸಂಸ್ಥೆಯು ನೀಡುತ್ತಿದೆ. ‘ಕೊರೋನಾ ಕಷ್ಟಕಾಲದಲ್ಲೂ ಅವಿರತ ಕೆಲಸ ಮಾಡಿದ ಸಂಸ್ಥೆ ನಮ್ಮದು’ ಎಂದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಶ್ರೀ ಸಭಾದ ಮುಂದಿನ ಯೋಜನೆಗಳ ಮಾಹಿತಿ ನೀಡಿದರು. ಭಜನಾ ಗುರುಗಳಾದ ಶ್ರೀ ಪೊಳಲಿ ಸುಬ್ಬ ರಾವ್ ಮತ್ತು ಹಿರಿಯ ನಾಗರಿಕರೊಡನೆ ಸದಾ ಚಟುವಟಿಕೆ ನಡೆಸುತ್ತಿರುವ ಕು। ಗಾನ ಪಿಲಿಂಜರನ್ನು ಗೌರವಿಸಲಾಯಿತು. ಸಭಾ ಕಾರ್ಯಕ್ರಮದ ಮೊದಲು ವಿವಿಧ ಭಜನಾ ತಂಡಗಳ ಭಜನಾ ಕಾರ್ಯಕ್ರಮ ನಡೆಯಿತು. ಶ್ರೀ ಸಭಾ ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ್ ರಾವ್ ಧನ್ಯವಾದಗಳನ್ನು ಸಮರ್ಪಿಸಿ, ಶ್ರೀ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸಭಾ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಫೋಟೋ ಮತ್ತು ವೀಡಿಯೋಗಳನ್ನು ಒದಗಿಸಿ ಸಹಕರಿಸಿದರು.

## ‘ಸಂತ ಅಲೋಶಿಯನ್ ಅವಾರ್ಡ್’ ಪಡೆದ ಕುಮಾರಿ ತನ್ವಿ ರಾವ್





ಮಂಗಳೂರು ಜೆಸುಯಿಟ್ (Jesuit) ಎಜುಕೇಶನಲ್ ಸೊಸೈಟಿ ಮತ್ತು 145 ವರ್ಷ ಇತಿಹಾಸವುಳ್ಳ ಸಮಾಜಕ್ಕೆ ಹಲವು ಮಹಾಸಾಧಕರನ್ನು ನೀಡಿದ ಸಂತ ಅಲೋಶಿಯಸ್ ಕಾಲೇಜ್‌ನ ಹಳೆವಿದ್ಯಾರ್ಥಿ ಸಂಘವು ಪ್ರತಿ ಎರಡು ವರ್ಷಗಳಿಗೊಮ್ಮೆ ‘ಸೈಂಟ್ ಅಲೋಶಿಯನ್ ಐಕಾನ್ ಅವಾರ್ಡ್’ನ್ನು ಸಾಧಕ ಅಲೋಶಿಯನ್‌ಗಳಿಗೆ ನೀಡುತ್ತಾ ಬಂದಿದ್ದು 2014ರಲ್ಲಿ (10 ವರ್ಷದ ಹಿಂದೆ) ಐಸಿಐಸಿಐ ಬ್ಯಾಂಕಿನ ಸಂಸ್ಥಾಪಕ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ. ವಿ. ಕಾಮತ್, ಯುಎಇ ಎಕ್ಸ್‌ಚೇಂಜ್ ಗ್ಲೋಬಲ್ ಆಪರೇಷನ್ ಮುಖ್ಯಸ್ಥ ಶ್ರೀ ವೈ. ಸುಧೀರ್ ಕುಮಾರ್ ಶೆಟ್ಟಿಯಂತಹ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಈ ಬಾರಿ 2024ರ ಐಕಾನ್ ಪ್ರಶಸ್ತಿಯನ್ನು ಭವಿಷ್ಯದ ಅಸಾಧಾರಣ ಸಾಧಕರಾಗಿ ಮೆರೆಯಬಲ್ಲ 5 ಯುವಸಾಧಕರಿಗೆ ದಿನಾಂಕ 11-01-2024ರಂದು ಸೈಂಟ್ ಅಲೋಶಿಯಸ್‌ನ Conclaveನಂದು ನೀಡುವುದಾಗಿ ರೆಕ್ಟರ್ ರೆವೆರೆಂಡ್ ಫಾದರ್ ಮೆಲ್ವಿನ್ ಪಿಂಟೊ ಎಸ್. ಜೆ. ನೇತೃತ್ವದ ಕಮಿಟಿ ನಿರ್ಧರಿಸಿದೆ. ರೆಕ್ಟರ್ ಮೆಲ್ವಿನ್ ಇವರು ವ್ಯಾಟಿಕನ್ ಕಮ್ಯುನಿಕೇಶನ್ ಮತ್ತು ರೇಡಿಯೋ ರೂಮ್‌ನಲ್ಲಿ ಐದು ವರ್ಷ ಕ್ರಿಶ್ಚಿಯನ್ನರ ಪವಿತ್ರ ಧಾರ್ಮಿಕ ಗುರುಗಳಾದ ಶ್ರೀ ಪೋಪ್ ಫ್ರಾನ್ಸಿಸ್‌ರವರ ನೇತೃತ್ವದಲ್ಲಿ ಏಷ್ಯಾ ಮತ್ತು ಇಂಡಿಯನ್ ಭಾಷೆಗಳ ಇಂಗ್ಲೀಷ್ ಡೆಸ್ಕ್‌ನ ನೇತೃತ್ವ ರೋಮ್ ದೇಶದಲ್ಲಿ ವಹಿಸಿದ್ದರು. ಕಮಿಟಿ ಆಯ್ಕೆ ಮಾಡಿದ ಐದು ಯುವಸಾಧಕರಲ್ಲಿ ನಮ್ಮ ಸಮಾಜದ ಹೆಮ್ಮೆಯ ಕುವರಿ ಕುಮಾರಿ ತನ್ವಿ ರಾವ್ ಇವರು ತಮ್ಮ ಶೈಕ್ಷಣಿಕ ಸಾಧನೆಗಳು, ತನ್ನ ನಡತೆ, ವಿದ್ಯಾರ್ಥಿ ಜೀವನದಲ್ಲಿ ಮಾಡಿದ ಸೇವಾಚಟುವಟಿಕೆಗಳು ಹಾಗೂ ತನ್ನ ಸ್ವ-ಪ್ರಯತ್ನದಿಂದ ಕಲಾಕ್ಷೇತ್ರದಲ್ಲಿ ಮಾಡಿದ ಸಾಧನೆಗಳಿಗೆ ಈ ಪ್ರಶಸ್ತಿಯನ್ನು ಪಡೆಯುತ್ತಿದ್ದಾರೆ ಎನ್ನುವುದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಚಾರ. ಸನ್ಮಾನಿಸಲ್ಪಡುವ ಉಳಿದ ನಾಲ್ಕು ಯುವ ಸಾಧಕರಲ್ಲಿ ಭಾರತದ ಹೆಮ್ಮೆಯ ಭಾರತೀಯ ಭೂಸೈನ್ಯದ ಲೆಫ್ಟಿನೆಂಟ್ ಕರ್ನಲ್ ಐಶ್ರಾಮ್ ಟೋನಿ ಸಿಂಗ್, ಏರ್ ಇಂಡಿಯಾ ಕಮಾಂಡರ್, ಪೈಲೆಟ್ ಗಾಲ್ವಿನ್‌ನಿಂದ ಕೋವಿಡ್ ಸಮಯದಲ್ಲಿ ‘ವಂದೇ ಭಾರತ್ ಮಿಶನ್’ ಮತ್ತು ಉಕ್ರೇನಿನಿಂದ ಯುದ್ಧ ಸಮಯದಲ್ಲಿ ಭಾರತೀಯರನ್ನು ಸ್ವದೇಶಕ್ಕೆ ಕರೆತಂದ ಭಾರತ ಸರ್ಕಾರದ ‘ಆಪರೇಷನ್ ಗಂಗಾ’ನಂತಹ ಮಿಶನ್‌ಗಳನ್ನು ತನ್ನ ಜೀವವನ್ನೂ ಲೆಕ್ಕಿಸದೆ ನಿರ್ವಹಿಸಿ ಹೆಸರಾದ ಕ್ಯಾಪ್ಟನ್ ಐಮಕಲ್ ಸಾಲ್ಡಾನ, ಅಂತಾರ್ರಾಷ್ಟ್ರೀಯ ದಕ್ಷಿಣ ಏಷ್ಯನ್ ಬಾಸ್ಕೆಟ್‌ಬಾಲ್ ಚಾಂಪಿಯನ್ ಶಾಂಕ್ರೈ, ಅಂತಾರ್ರಾಷ್ಟ್ರೀಯ ಸಂಸ್ಥೆ ರೋಮ್‌ನಲ್ಲಿ ಯುನಿಸೆಫ್‌ನ ಪ್ರಧಾನ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈಷ್ಣವಿ ಪವಿತ್ರ ಇಂತಹ ಸಾಧಕರೊಂದಿಗೆ ಕು। ತನ್ವಿ ರಾವ್‌ರವರನ್ನು ‘ನಾರಿಶಕ್ತಿ ಮತ್ತು ಮಹಿಳಾ ಸಬಲೀಕರಣ’ದ ರಾಯಭಾರಿಯನ್ನಾಗಿ ಗುರುತಿಸಿ, ಸೈಂಟ್ ಅಲೋಶಿಯನ್ ಐಕಾನ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎನ್ನುವುದು ಕದ್ರಿ ನರಸಪ್ಪಯ್ಯ ಕುಟುಂಬ ಮತ್ತು ಕಂಕನಾಡಿಯ ಅಚ್ಯುತ ಶರ್ಮ ಕುಟುಂಬಕ್ಕೆ ಸಂದ ಅಪೂರ್ವ ಗೌರವ. ಈ ಹರ್ಷದ ಸಂಗತಿಯನ್ನು ಕದ್ರಿಯ ದಿ। ಗೋಪಾಲಕೃಷ್ಣ ರಾಯರ ಹಾಗೂ ಕಂಕನಾಡಿಯ ರಘುರಾಮ ಶರ್ಮರ ಪೌತ್ರಿ ಆದ ತನ್ವಿಯು ಸಮಾಜ ಬಾಂಧವರಲ್ಲಿ ಈ ಲೇಖನದ ಮೂಲಕ ಹಂಚಿಕೊಳ್ಳುತ್ತಿದ್ದಾರೆ. ತನ್ವಿಯು ಈ ಗೌರವದ ಶ್ರೇಯವನ್ನು ತನ್ನನ್ನು ವೈಯಕ್ತಿಕ ಭೇಟಿಯ ಮೂಲಕ ಆಶೀರ್ವದಿಸಿ, ತನಗೆ ಮಾರ್ಗದರ್ಶನ ನೀಡಿದ ಗೌರವಾನ್ವಿತ ಭಾರತರತ್ನ ಡಾ। ಅಬ್ದುಲ್ ಕಲಾಂ ಅವರಿಗೆ ಅರ್ಪಿಸಿ ತನ್ನ ಕುಟುಂಬದ ಹಾಗೂ ಸಮಾಜದ ಹಿರಿಯರಿಂದ ಆಶೀರ್ವಾದ ಬೇಡುತ್ತಾ, ಪ್ರಶಸ್ತಿಯ ಗರಿಮೆ - ಕೀರ್ತಿಯನ್ನು ತನಗಿಂತ ಹಿರಿಯ ಅಲೋಶಿಯನ್ ಹಳೆವಿದ್ಯಾರ್ಥಿಗಳು ಹಾಗೂ ಕಿರಿಯ ಅಲೋಶಿಯನ್ ವಿದ್ಯಾರ್ಥಿಗಳಿಗೆ ಅರ್ಪಿಸಿದ್ದಾಳೆ.

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು :

ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 ✆ : 9343361618 e-mail : jnanashakthisss@gmail.com



## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

✆ : 9880968032 / 0824-2982095

**ಶಾಖೆಗಳು**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575

### ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ-ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. 10,000/- ಠೇವಣಿ ಅವಧಿ : 88 ತಿಂಗಳು

ವಿಶೇಷ ಬಡ್ಡಿದರ : 9.6%


## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

# 'ಸ್ಕೋಲರ್ಸ್ ಡೇ - 2024

### ಭಾನುವಾರ 28, ಜನವರಿ 2024

ಬೆಳಗ್ಗೆ ಗಂಟೆ 8.30ರಿಂದ 10.15 : **ಉಪಾಹಾರ ಮತ್ತು ನೋಂದಾವಣೆ**

ಬೆಳಗ್ಗೆ ಗಂಟೆ 10.30ರಿಂದ 11.00 : **ಉದ್ಘಾಟನಾ ಕಾರ್ಯಕ್ರಮ**

ಪ್ರಾರ್ಥನೆ

ದೀಪ ಪ್ರಜ್ವಲನ




ಸ್ವಾಗತ ಭಾಷಣ : **ಡಾ. ಎ. ಪಿ. ಕೃಷ್ಣ**

ಅಧ್ಯಕ್ಷರ ಮಾತು : **ಶ್ರೀ ಹರ್ಷಕುಮಾರ್ ಕೇದಿಗೆ**

**SESSION I**

ಬೆಳಗ್ಗೆ ಗಂಟೆ 11–00ರಿಂದ
ಬೆಳಗ್ಗೆ ಗಂಟೆ 11–30ರ ವರೆಗೆ



ಪ್ರಧಾನ ಭಾಷಣ :

**ಶ್ರೀ ನರೇಂದ್ರ ನಾಯಕ್,** ಚೇರ್‌ಮೇನ್
ಎಕ್ಸ್‌ಪರ್ಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಮಂಗಳೂರು


**ವಿಷಯ :**

**'ಶೈಕ್ಷಣಿಕ ಸಾಧನೆಯಿಂದ ವ್ಯಕ್ತಿತ್ವದ ವಿಕಾಸ'**




**'PERSONALITY DEVELOPMENT THROUGH EDUCATIONAL ACHIEVEMENTS**

**SESSION II**



ಬೆಳಗ್ಗೆ ಗಂಟೆ 11–30ರಿಂದ
ಮಧ್ಯಾಹ್ನ ಗಂಟೆ 12–00ರ ವರೆಗೆ

ಮುಖ್ಯ ಅತಿಥಿ :

**ಶ್ರೀ ಕೃಷ್ಣಮೋಹನ್ ಶ್ಯಾನುಭೋಗ್**
ಜನರಲ್ ಮ್ಯಾನೇಜರ್, ISRO, ಬೆಂಗಳೂರು




**ವಿಷಯ :**

**'HARD WORK AND PERSEVERANCE ARE STEPPING STONES FOR SUCCESS'**
**- An ISRO Model**

**'ಕಠಿಣ ಪರಿಶ್ರಮ ಮತ್ತು ದೃಢನಿಷ್ಠೆ ಯಶಸ್ಸಿಗೆ ಸೋಪಾನ' - ISRO ಮಾದರಿ**

ಮಧ್ಯಾಹ್ನ ಗಂಟೆ 12–00ರಿಂದ 12–15ರ ವರೆಗೆ : **ಸನ್ಮಾನ**

**ಶ್ರೀ ಕೃಷ್ಣಮೋಹನ್ ಶ್ಯಾನುಭೋಗ್**

ಚಂದ್ರಯಾನ - 3 ಇದರ ಓರ್ವ ಪ್ರಧಾನ ರೂವಾರಿ

— — — — —

ಮಧ್ಯಾಹ್ನ ಗಂಟೆ 12–15ರಿಂದ 12–30ರ ವರೆಗೆ : **ಸಮೂಹ ಚರ್ಚೆ**

Moderation : **ಶ್ರೀ ಕೆ. ಪ್ರಭಾಕರ ರಾವ್**

— — — — —

ಮಧ್ಯಾಹ್ನ ಗಂಟೆ 12.30ರಿಂದ 1–00ರ ವರೆಗೆ :

**ವಿದ್ಯಾರ್ಥಿ ವೇತನ ವಿತರಣೆ**

ಧನ್ಯವಾದ ಸಮರ್ಪಣೆ : **ಶ್ರೀ ನಾಗರಾಜ ಶರ್ಮ**

— — — — —

ಮಧ್ಯಾಹ್ನ ಗಂಟೆ 1–00ರಿಂದ 2–00ರ ವರೆಗೆ : **ಭೋಜನ**

**ವಿಶೇಷ ಸೂಚನೆ :** — — — — — — — — — — — — — — — — — —

✓ **ಸ್ಕೋಲರ್‌ಶಿಪ್ ಪಡೆಯುವ ವಿದ್ಯಾರ್ಥಿಗಳು ಬೆಳಗ್ಗೆ ಗಂಟೆ 10–15ರ ಮೊದಲು ತಮ್ಮ ಹೆಸರನ್ನು ಕೌಂಟರ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.**

✓ **ತಡವಾಗಿ ಬಂದ ವಿದ್ಯಾರ್ಥಿಗಳಿಗೆ ಸ್ಕೋಲರ್‌ಶಿಪ್‌ನ್ನು ಕೊಡಲಾಗುವುದಿಲ್ಲ.**

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು – 'ವಾರ್ಷಿಕೋತ್ಸವ'



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ 'ವಾರ್ಷಿಕೋತ್ಸವ' ತಾ. 24–12–2023ನೇ ರವಿವಾರ ನಡೆಯಿತು. ಶ್ರೀ ಶಾರದಾಂಬಾ ಭಜನಾ ಮಂಡಳಿಯ ಭಜನಾ ಸೇವೆ ಬಳಿಕ ವೇ। ಮೂ। ಪಾವಂಜೆ ಶ್ರೀ ಸುಬ್ರಹ್ಮಣ್ಯ ಭಟ್ ಪೌರೋಹಿತ್ಯದಲ್ಲಿ ಶ್ರೀ ಐ. ಪಿ. ನಾಗರಾಜ್ ರಾವ್ ಮತ್ತು ಶ್ರೀಮತಿ ಭುವನಾ ನಾಗರಾಜ್ ಯಜಮಾನತ್ವಿಕೆಯಲ್ಲಿ ಶ್ರೀ ಸತ್ಯನಾರಾಯಣ ಪೂಜೆ ಆರಂಭಗೊಂಡಿತು. ಬಳಿಕ ಹೂ ಜೋಡಣೆ, ಅಡುಗೆ, ರಂಗೋಲಿ ಸ್ಪರ್ಧೆಗಳು ವಿವಿಧ ವಿಭಾಗದಲ್ಲಿ ನಡೆದವು. ತೀರ್ಪುಗಾರರಾಗಿ ಶ್ರೀ ನಾಗರಾಜ್ ಶರ್ಮ, ಶ್ರೀ ರಘುವೀರ್ ಪೆರ್ಡೂರ್, ಶ್ರೀಮತಿ ಉದಯ ಕುಮಾರಿ, ಶ್ರೀಮತಿ ಪ್ರೇಮಲತಾ ಸಹಕರಿಸಿದರು. ಬಳಿಕ 'ಮಹಾಸಭೆ' ಪ್ರಾರ್ಥನೆ ಯೊಂದಿಗೆ ಆರಂಭಗೊಂಡಿತು. ಶ್ರೀ ಸಭಾ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಸರ್ವರನ್ನೂ ಸ್ವಾಗತಿಸಿದರು. ಮಹಾಸಭೆಯು ಹಲವು ನಿರ್ಣಯಗಳನ್ನು ಅಂಗೀಕರಿಸಿದ ಬಳಿಕ 2022–23ರ ಆಡಳಿತ ಮಂಡಳಿಯ ವರದಿಯನ್ನು ಶ್ರೀ ಸಭಾ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಮಂಡಿಸಿ ಅನುಮೋದನೆ ಪಡೆದರು. ಶ್ರೀ ಸಭಾ ಕೋಶಾಧಿಕಾರಿ ಗತವರ್ಷದ ಆಯ–ವ್ಯಯ, ಬ್ಯಾಲೆನ್ಸ್‌ಶೀಟ್‌ನ್ನು ಮಂಡಿಸಿ, ಸದಸ್ಯರ ಪ್ರಶ್ನೆಗಳಿಗೆ, ಸಲಹೆಗಳಿಗೆ ಸೂಕ್ತವಾಗಿ ಸ್ಪಂದಿಸಿ ಅನುಮೋದನೆ ಪಡೆದುಕೊಂಡರು. ಶ್ರೀ ಸುಬ್ರಹ್ಮಣ್ಯ ಸಭಾ ಮತ್ತು ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು. ಮುಂದಿನ ವರ್ಷಕ್ಕೂ ಶ್ರೀ ನಾಗರಾಜ್ ಶರ್ಮರನ್ನು ಲೆಕ್ಕಪರಿಶೋಧಕರಾಗಿ ನೇಮಿಸಲಾಯಿತು. ಶ್ರೀ ಸಭಾ ಉಪಾಧ್ಯಕ್ಷ ಡಾ। ಎ. ಪಿ. ಕೃಷ್ಣ ಧನ್ಯವಾದ ಬಳಿಕ ಮಂಗಳಾರತಿ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವದ ಸ್ಪರ್ಧಾ ವಿಜೇತರು

**ಅಡುಗೆ ಸ್ಪರ್ಧೆ : ಸಿಹಿ ವಿಭಾಗ :** 1. ಶ್ರೀಮತಿ ಸೌಭದ್ರಾ ಶಾಸ್ತ್ರಿ 2. ಶ್ರೀಮತಿ ಸೌಮ್ಯ ಪ್ರಸಾದ್
**ಖಾರ ವಿಭಾಗ :** ಶ್ರೀಮತಿ ಸೌಭದ್ರಾ ಶಾಸ್ತ್ರಿ

**ಹೂ ಜೋಡಣೆ ಸ್ಪರ್ಧೆ** : 1. ಶ್ರೀಮತಿ ಸೌಭದ್ರಾ ಶಾಸ್ತ್ರಿ, 2. ಶ್ರೀಮತಿ ಪುಷ್ಪಾ ಶ್ರೀನಿವಾಸ್

**ರಂಗೋಲಿ ಸ್ಪರ್ಧೆ :** 1. ಶ್ರೀಮತಿ ತನುಜಾ ಅಮರ್‌ದೀಪ್ 2. ಶ್ರೀಮತಿ ಪುಷ್ಪಾ ಶ್ರೀನಿವಾಸ್ 3. ಶ್ರೀಮತಿ ಕನಕವಲ್ಲಿ ಹರ್ಷಕುಮಾರ್

**ಬಹುಮಾನಗಳ ಪ್ರಾಯೋಜಕರು : ಶ್ರೀಮತಿ ಕುಸುಮಾ ನವೀನ್** ಮತ್ತು **ಶ್ರೀಮತಿ ಪುಷ್ಪಾ ಶ್ರೀನಿವಾಸ್**



ಭಾರತೀಯ ರೈಲ್ವೆಯ ದಕ್ಷಿಣ ರೈಲ್ವೇ ವಿಭಾಗಕ್ಕೆ
ಸಲಹಾ ಸಮಿತಿ ಸದಸ್ಯರಾಗಿ
ಕೇಂದ್ರ ಸರಕಾರದಿಂದ
ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿ
**ಶ್ರೀ ಪಿ. ಶ್ರೀಕಾಂತ್ ರಾವ್**
ನಾಮನಿರ್ದೇಶನ.

## 'ಶಿವ ಪಂಚಾಕ್ಷರಿ' ಪಠಣ



ಬೆಳ್ತಂಗಡಿ ತಾಲೂಕು ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನದಲ್ಲಿ ಧನುರ್ಮಾಸದ 3ನೇ ಸೋಮವಾರ ತಾ. 01–01–2024ರಂದು ಬೆಳ್ತಂಗಡಿ ತಾಲೂಕು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಸದಸ್ಯರಿಂದ 'ಶಿವ ಪಂಚಾಕ್ಷರಿ' ಪಠಣ ನಡೆಯಿತು.

NAVADURGA FINANCIALS
Estd 1998
SCAN ME TO KNOW MORE!!!

## 'ಬಸ್ ತಂಗುದಾಣ' ಲೋಕಾರ್ಪಣೆ




ಕಳಸದ ಕೈಮರದಲ್ಲಿ ಲೋಕಾರ್ಪಣೆ ಗೊಂಡ 'ಬಸ್ ತಂಗುದಾಣ' ಇದು ಹಂದಿಗೋಡಿನ ದಿ। ನಾಗಮ್ಮ ಮತ್ತು ಶ್ರೀ ಪುಟ್ಟದೇವರಯ್ಯ ಇವರ ಸ್ಮರಣಾರ್ಥವಾಗಿ ಅವರ ಮಗ ಶ್ರೀಯುತ ರಾಮಚಂದ್ರ ಹೆಬ್ಬಾರ್ ಮತ್ತು ಇವರ ಕುಟುಂಬದವರು ನಿರ್ಮಿಸಿರುತ್ತಾರೆ.

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

# ಎಂ. ಹರಿದಾಸ್ ರಾವ್



ಎಂ. ಹರಿದಾಸರಾಯರ 'ಬಾಳಿನ ಗಿಡ' ಕಾದಂಬರಿಯು 1949ರಲ್ಲಿ ಪ್ರಥಮ ಮುದ್ರಣವಾಗಿ ಆ ಬಳಿಕ 1969ರ ವರೆಗೆ ಏಳು ಬಾರಿ ಮರುಮುದ್ರಣವಾಗಿತ್ತು. ನಂತರ ನನ್ನ ಎರಡೂವರೆ ವರ್ಷದ ಪ್ರಯತ್ನದಿಂದ ಅವರ ಪುತ್ರರಾದ Lt. Col. ಡಾ। ಎಂ. ರಮಾಕಾಂತ್ ರಾವ್, ಪುಣೆ ಮತ್ತು ಪ್ರೊ। ಎಂ. ಅಶೋಕ್ ಕುಮಾರ್, ಸಿಕಂದರಾಬಾದ್ ಅವರನ್ನು ಸಂಪರ್ಕಿಸಿ, ಅವರ ಅನುಮತಿ ಪಡೆದು 50 ವರ್ಷದ ನಂತರ 2019ರಲ್ಲಿ ಎಂಟನೇ ಮುದ್ರಣ ಮೂಡಿಬಂತು. ಈ ಮುದ್ರಣವು ಸಾಹಿತ್ಯ ಭಂಡಾರದ ಮ್ಹಾಲಿಕರಾದ ಶ್ರೀ ಎಂ. ಜಿ. ರಾಜ ಇವರ ಸಹಕಾರದಿಂದ ಪ್ರಕಟವಾಯಿತು. 'ಬಾಳಿನ ಗಿಡ' ಕಾದಂಬರಿಯನ್ನು 1960ನೇ ದಶಕದಲ್ಲಿ ಮದ್ರಾಸ್ ಮತ್ತು ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಇಂಟರ್ಮೀಡಿಯೇಟ್ ಕ್ಲಾಸುಗಳಿಗೆ ಪಠ್ಯಪುಸ್ತಕವಾಗಿ ಅಂದಿನ ಸರಕಾರ ನಮೂದಿಸಿತ್ತು. 2019ರಲ್ಲಿ ಎಂಟನೇ ಮುದ್ರಣವಾದ ನಂತರದ ಬೆಳವಣಿಗೆಗಳನ್ನು ಈ ಕೆಳಗಿನಂತೆ ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ.

- ಮಾರ್ಪಳ್ಳಿ ನಾಗಪ್ಪಯ್ಯ ವಂಶಜರ ಧಾರ್ಮಿಕ ಸೇವಾಸಮಿತಿಯನ್ನು ಶ್ರೀ ಎಂ. ಆರ್. ವಾಸುದೇವರವರ ನೇತೃತ್ವದಲ್ಲಿ ಕುಟುಂಬದವರು ಸೇರಿ 2019ರಲ್ಲಿ ಪುಸ್ತಕ ಬಿಡುಗಡೆಯಾದ ನಂತರ ಸ್ಥಾಪಿಸಿದರು.
- ಉಜಿರೆಯ ದಿ। ಮಾರ್ಪಳ್ಳಿ ಸುಬ್ಬರಾಯರ ಮಾರ್ಪಳ್ಳಿಯಲ್ಲಿದ್ದ 41 ಸೆಂಟ್ಸ್ ಜಾಗವನ್ನು ಅವರ ಉತ್ತರಾಧಿಕಾರಿಗಳು ಧಾರ್ಮಿಕ ಸೇವಾ ಸಮಿತಿಗೆ ದಾನ ಮಾಡಿದರು. ಈ 41 ಸೆಂಟ್ಸ್ ಜಾಗಕ್ಕೆ **'ಲಕ್ಷ್ಮೀ ಸುಬ್ರಾಯ ವನ'** ಎಂದು ನಾಮಕರಣ ಮಾಡಿದರು.
- ತಾ. 20–05–2023ರಂದು ಧಾರ್ಮಿಕ ಸೇವಾ ಸಮಿತಿಯವರು ಮತ್ತು ಕುಟುಂಬದವರು ಮೇಲಿನ ಜಾಗದಲ್ಲಿ ನಾಗಬ್ರಹ್ಮ ಸ್ಥಾನದ ಮತ್ತು ದೈವಗಳ ಪ್ರತಿಷ್ಠಾಪನೆ ಸಮಾರಂಭವನ್ನು ನೆರವೇರಿಸಿದರು.
- ತಾ. 20–05–2023ರಂದು ಎಂ. ಹರಿದಾಸ್ ರಾವ್ ಅವರ ಜನ್ಮಶತಾಬ್ದಿ ಸ್ಮರಣಾರ್ಥ ಅಂಚೆ ಇಲಾಖೆ, ಭಾರತ ಸರಕಾರದ ವತಿಯಿಂದ ವಿಶೇಷ ಅಂಚೆ ಲಕೋಟೆ ಬಿಡುಗಡೆ ಕಾರ್ಯಕ್ರಮ ಹೆಡ್‌ಪೋಸ್ಟ್ ಆಫೀಸು ಉಡುಪಿಯಲ್ಲಿ ನೆರವೇರಿತು.
- ತಾ. 20–05–2023ರಂದು 'ಲಕ್ಷ್ಮೀ ಸುಬ್ರಾಯ ವನ'ದ ಎದುರು ರಸ್ತೆಗೆ **'ಮಾರ್ಪಳ್ಳಿ ಹರಿದಾಸ್ ರಾವ್ ಮಾರ್ಗ'** ಎಂದು ಹೆಸರಿಸಲಾಯಿತು.
- ತಾ. 20–05–2023ರಂದು ಡಾ। ಸರ್ವಮಂಗಳ ಪಿ. ಆರ್., ಹುಬ್ಬಳ್ಳಿ ಅವರು ಬರೆದಿರುವ **'ಬಾಳಿನ ಗಿಡ'** ಖ್ಯಾತಿಯ ಪತ್ರಕರ್ತ, ಸಾಹಿತಿ ಮಾರ್ಪಳ್ಳಿ ಹರಿದಾಸ ರಾವ್ ಕೃತಿಯು ಕಾಂತಾವರ ಕನ್ನಡ ಸಂಘದಿಂದ ಪ್ರಕಟವಾಗಿ ಬಿಡುಗಡೆ ಸಮಾರಂಭ ನೆರವೇರಿತು.
- ಈ ಮೇಲಿನ ಎಲ್ಲಾ ಕಾರ್ಯಕ್ರಮಗಳಿಗೆ ಎಂ. ಹರಿದಾಸರಾಯರ ಪುತ್ರ ಶ್ರೀ ಎಂ. ರಮಾಕಾಂತ್ ರಾವ್ ಮತ್ತು ಅವರ ಪತ್ನಿ ಸುಭಾಷಿಣಿಯವರು ಪುಣೆಯಿಂದ ಬಂದು ಚಂದಗಾಣಿಸಿದರು.
- ತಾ. 12–10–2022 : ಎಂ. ಹರಿದಾಸ ರಾಯರು ಒಟ್ಟು 20 ಕಾದಂಬರಿ / ಅನುವಾದ / ಪ್ರಬಂಧಗಳನ್ನು ಬರೆದಿದ್ದರು. ಬಾಳಿನ ಗಿಡ ಕಾದಂಬರಿಯಲ್ಲಿ ಇರುವ ಗಜಂತೋಡಿಯಲ್ಲಿ ಈಗ ಶ್ರೀ ಎಂ. ಸುದರ್ಶನ್ ರಾವ್ ವಾಸವಿದ್ದು, ಅವರ ಮನೆಯಲ್ಲಿ ಹರಿದಾಸರಾಯರು ಬರೆದ ಇನ್ನು ಐದು ಪುಸ್ತಕಗಳು ದೊರಕಿದವು. ಆ ಪುಸ್ತಕಗಳ ಹೆಸರು 1. ಎಚ್ಚೆತ್ತ ಆಗ್ನೇಯ ಏಷಿಯಾ 2. ದ್ವಿತೀಯ ಮಹಾಯುದ್ಧ 3. ಹುಚ್ಚರ ಮನೆ 4. ಮರುಭೂಮಿ ಅರಬರು ಮತ್ತು 5. ಉಕ್ಕಿನ ಮನುಷ್ಯ
- ತಾ. 27–07–2023 : ಇನ್ನೊಂದು ಅವರು ಬರೆದ ಕಾದಂಬರಿ 'ಹಸಿದ ಹಂಬಲ'. ಈ ಪುಸ್ತಕ ನನ್ನ ಆಪ್ತ ಸ್ನೇಹಿತರಾದ ದಿನೇಶ್ ನಾಯಕರು ಅವರ ಒಂದು ಪುಸ್ತಕದ ಕವಾಟಿನಲ್ಲಿ ಸಿಕ್ಕಿತು ಎಂದು ಫೋನ್ ಮಾಡಿ ತಿಳಿಸಿದಾಗ ನನಗೆ ಅತ್ಯಾನಂದವಾಯಿತು. ಹೀಗೆ ಇಪ್ಪತ್ತು ಪುಸ್ತಕಗಳಲ್ಲಿ ಈಗ ಏಳು ಪುಸ್ತಕಗಳು ಲಭ್ಯವಾಗಿವೆ.

ಎರಡೂವರೆ ವರ್ಷದ ನನ್ನ ಪ್ರಯತ್ನ ಹಾಗೂ ಹಿತೈಷಿಗಳ ಸಹಕಾರದಿಂದ 50 ವರ್ಷದ ನಂತರ 'ಬಾಳಿನ ಗಿಡ' ಕಾದಂಬರಿ 8ನೇ ಮುದ್ರಣ ಕಂಡಿತು. ಈ ಪ್ರಯತ್ನದಿಂದಾಗಿ ಲೇಖಕರ ಮಕ್ಕಳು ಹಾಗೂ ಕುಟುಂಬದವರ ಸಂಪರ್ಕ ಕಡಿದು ಹೋದದ್ದನ್ನು ಪುನಃ ಜೋಡಿಸುವ ಹಾಗೆ ಆಯಿತು. ಅಲ್ಲದೆ ಮಾರ್ಪಳ್ಳಿ ಕುಟುಂಬದವರು ಧಾರ್ಮಿಕ ಸೇವಾ ಸಮಿತಿಯನ್ನು ಸ್ಥಾಪಿಸಿ, ಮಾರ್ಪಳ್ಳಿಯಲ್ಲಿ ಮೇಲೆ ವಿವರಿಸಿದಂತೆ ಉತ್ತಮ ಕಾರ್ಯಕ್ರಮಗಳನ್ನು ಜರುಗಿಸಿ ಲೇಖಕರ ಹೆಸರನ್ನು ಅಮರವನ್ನಾಗಿಸಿದ್ದಾರೆ.

ಎಂ. ಹರಿದಾಸರಾಯರು ತಮ್ಮ 35 ವರ್ಷದ ಅವಧಿಯಲ್ಲಿ ಇಪ್ಪತ್ತು ಉತ್ತಮ ಪುಸ್ತಕಗಳನ್ನು ಬರೆದಿದ್ದರು. ಅವರು ತಮ್ಮ ಪೂರ್ತಿ ಜೀವನ ಬಾಳಿದ್ದರೆ ಕನ್ನಡದ ಶ್ರೇಷ್ಠ ಲೇಖಕರಾಗಿ ಮೆರೆಯುತ್ತಿದ್ದರು. ಅಲ್ಲದೆ ನಮ್ಮ ಸಮಾಜದ ಒಬ್ಬ ಶ್ರೇಷ್ಠ ಲೇಖಕನೆಂದು ನಾವು ಹೆಮ್ಮೆಪಡಬಹುದಿತ್ತು. ಇನ್ನೊಂದು ಮುಖ್ಯವಾದ ವಿಷಯ ನಾನು ಇಲ್ಲಿ ತಿಳಿಸಲು ಬಯಸುತ್ತೇನೆ. ಎಂ. ಹರಿದಾಸ ರಾಯರು ಬಾಲ್ಯದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಒಂದು ವರ್ಷ ಜೈಲಿನಲ್ಲಿ ಕಠಿಣ ಶಿಕ್ಷೆಯನ್ನು ಅನುಭವಿಸಿದ್ದರು.

ಲೇಖಕರ 105ನೇ ಜನ್ಮದಿನದಂದು ನಾನು ಈ ಸಣ್ಣ ಲೇಖನ ಬರೆದು ಎಂ. ಹರಿದಾಸರಾಯರನ್ನು ಸ್ಮರಿಸುತ್ತಾ ಓದುಗರಿಗೆ ಮೇಲಿನ ಬೆಳವಣಿಗೆಗಳನ್ನು ತಿಳಿಸಲು ಸಂತೋಷಪಡುತ್ತೇನೆ.

**ಬೈಲಕೆರೆ ಗೋವಿಂದ ರಾವ್, ಬೆಂಗಳೂರು ಮೊಬೈಲ್ : 9945695360**

## ಅಳಿದೆ ನಮ್ಮನೆ... ಇಳಿರುವುದು ಸುಮ್ಮನೆ...



**ಅನಾರು ಭಾಸ್ಕರ ರಾವ್** (80) ತಾ. 25–11–2023ನೇ ಶನಿವಾರ ಅನಾರು ಪಟ್ರಮೆಯಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●




ಬೈಂದೂರು ಧಾರೇಶ್ವರ ದಿ। ನಾಗರಾಜ ರಾವ್‌ರವರ ಧರ್ಮಪತ್ನಿ **ಶ್ರೀಮತಿ ರಮಾ ಎನ್. ರಾವ್** (76) ತಾ. 17–12–2023ನೇ ರವಿವಾರ ನಿಧನ ಹೊಂದಿದರು. ಇವರು ಓರ್ವ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

●●●




ದಿ। ಅದ್ಯಪಾಡಿ ಮುಕುಂದ ರಾವ್ ಇವರ ಧರ್ಮಪತ್ನಿ **ಶ್ರೀಮತಿ ರಮಾಬಾಯಿ** (84) ತಾ 17–12–2023ನೇ ರವಿವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಡಾ. ನಾರಾಯಣ ಶರ್ಮರವರ ಪುತ್ರ **ಶ್ರೀ ಜಗದೀಶ್ ಶರ್ಮ** (86) ತಾ. 1–1–2024ನೇ ಸೋಮವಾರ ಬಂಟ್ವಾಳದ ಕೇದಗೆಯಲ್ಲಿ ನಿಧನ ಹೊಂದಿದರು.



**ಪಾದೆಬೆಟ್ಟು ಶ್ರೀ ಕುಮಾರ್ ರಾವ್** (79) ತಾ. 1–1–2024ನೇ ಸೋಮವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಇವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



ಉಬರಳೆ ದಿ। ನಾರಾಯಣಯ್ಯ ಅವರ ಪುತ್ರ **ಅಶೋಕ್ ರಾವ್ ಉಬರಳೆ** (51) ತಾ. 22–12–2023ನೇ ಶುಕ್ರವಾರ ನಿಧನ ಹೊಂದಿದರು. ಇವರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



**ಶ್ರೀ ಯು. ವಿ. ಶಿವಪ್ರಸಾದ್** ತಾ. 9–01–2024ನೇ ಮಂಗಳವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಮಗ, ಮಗಳನ್ನು ಅಗಲಿದ್ದಾರೆ. ಇವರು ನಿವೃತ್ತ NMPTಯ ಆಫೀಸ್ ಸುಪರಿಟೆಂಡೆಂಟ್ ಆಗಿ ಸೇವೆ ಸಲ್ಲಿಸಿದ್ದರು.

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ




ಮಂಗಳೂರು ನಿವಾಸಿ ಪಡುಮಲೆ ಶ್ರೀ ಲಕ್ಷ್ಮೀನಾರಾಯಣ ರಾವ್ ಮತ್ತು ಶ್ರೀಮತಿ ರಮಾದೇವಿ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 2,00,000/– (ರೂಪ್ಾಯ ಎರಡು ಲಕ್ಷ) ಮತ್ತು ಶ್ರೀ ಸಭಾದಲ್ಲಿ ಈ ಹಿಂದೆ ಸ್ಥಾಪಿಸಿರುವ ವಿಧ್ಯಾನಿಧಿಗೆ ರೂ. 2,00,000/– (ರೂಪ್ಾಯ ಎರಡು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರು ಈ ಹಿಂದೆ ರೂ. 8 ಲಕ್ಷ ಶಿವಸದನಕ್ಕೆ ನೀಡಿದ್ದು ಒಟ್ಟು ರೂ. 10 ಲಕ್ಷ ದೇಣಿಗೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

ಕುರಾಯ ಶಿವರಾಮ ಶಾಸ್ತ್ರೀಯವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಕೆ.ಎಸ್. ಕಮಲಾ, ಪುತ್ರ ಶ್ರೀ ಕೆ. ಎಸ್. ರಾಮಸ್ವಾಮಿ ಮತ್ತು ಶ್ರೀಮತಿ ಬೀಜಿ ಕೃಷ್ಣನ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 2,00,000/– (ರೂಪ್ಾಯ ಎರಡು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಸಂತೋಷ್ ಕುಮಾರ್ ಯು. ಉಪಸ್ಥಿತರಿದ್ದರು.





ಮಹಾರಾಷ್ಟ್ರದ ಕರಾಡ ನಿವಾಸಿ ಎಲ್ಲೂರು ಶಂಕರ್ ರಾವ್ ಸ್ಮರಣಾರ್ಥ ಅವರ ಪುತ್ರ ಶ್ರೀ ವೈ. ಚಂದ್ರಶೇಖರ್ ರಾವ್ ತನ್ನ 60ನೇ ಹುಟ್ಟುಹಬ್ಬ ಹಾಗೂ ತನ್ನ ಸುಪುತ್ರ ಡಾ. ಅಖಿಲ್ ರಾವ್ ಮತ್ತು ಡಾ. ಶಾಲ್ವಿ ಎ. ರಾವ್ ಇವರ ವಿವಾಹದ ಶುಭಸಂದರ್ಭದಲ್ಲಿ ತಮ್ಮ ತಾಯಿ ಶ್ರೀಮತಿ ವಿಶಾಲಾಕ್ಷಿ ಎಸ್. ರಾವ್, ಇವರ ಪತ್ನಿ ಶ್ರೀಮತಿ ಪ್ರಸನ್ನ ಸಿ. ರಾವ್ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 1,00,001/– (ರೂಪ್ಾಯ ಒಂದು ಲಕ್ಷದ ಒಂದು) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಮಗಳು ಶ್ರೀಮತಿ ಪಾಯಲ್, ಅಳಿಯ ಶ್ರೀ ಪರೀಕ್ಷಿತ್ ರಾವ್, ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕ ಶ್ರೀ ಇನ್ನ ಚಂದ್ರಕಾಂತ್ ರಾವ್ ಮತ್ತು ಅವರ ಕುಟುಂಬಸ್ಥರು ಉಪಸ್ಥಿತರಿದ್ದರು.





ಉಡುಪಿ ನಿವಾಸಿ ಎಲ್ಲೂರು ಶ್ರೀ ನಿಖಿಲ್ ರಾಮಕೃಷ್ಣ ತಮ್ಮ ಧರ್ಮಪತ್ನಿ ಶ್ರೀಮತಿ ವಿಮಲಾ ನಿಖಿಲ್ ಸ್ಮರಣಾರ್ಥ ಪುತ್ರ ಶ್ರೀ ಮಂದಾರ್ ಎನ್. ಉಡುಪಿ, ಸೊಸೆ ಶ್ರೀಮತಿ ಶ್ವೇತಾ ಎಂ. ಉಡುಪಿ, ಮಗಳು ಶ್ರೀಮತಿ ದೀಪಾಲಿ ಅಶೋಕ್ ತಂತ್ರಾಡಿ, ಶ್ರೀ ಅಶೋಕ್ ತಂತ್ರಾಡಿ, ಮೊಮ್ಮಕ್ಕಳಾದ ವೇದಾಂತ್, ವಿಧಿತ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 1,01,001/– (ರೂಪ್ಾಯ ಒಂದು ಲಕ್ಷದ ಒಂದು ಸಾವಿರದ ಒಂದು) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷ ಡಾ ಎ. ಪಿ. ಕೃಷ್ಣ ತಮ್ಮ ಮಾತಾಪಿತರಾದ ಎ. ಶಂಕರನಾರಾಯಣಯ್ಯ ಮತ್ತು ಶ್ರೀಮತಿ ರಾಧಮ್ಮ ಸ್ಮರಣಾರ್ಥ ಶ್ರೀ ಸಭಾದಲ್ಲಿ ಸ್ಥಾಪಿಸಿರುವ ವಿದ್ಯಾನಿಧಿಗೆ ರೂ. 50,000/– ನೀಡಿ ನಿಧಿಯ ಮೊತ್ತವನ್ನು ರೂಪ್ಾಯ ಒಂದು ಲಕ್ಷಕ್ಕೆ ಏರಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ಸಂತೋಷ್ ರಾವ್ ಯು., ಶ್ರೀ ಶ್ಯಾಂಪ್ರಸಾದ್ ಶಾನುಭೋಗ್, ಶ್ರೀ ವೇಣುಗೋಪಾಲ್ ಶಾನುಭೋಗ್, ಶ್ರೀಮತಿ ಮಮತಾ ವೇಣುಗೋಪಾಲ್ ಉಪಸ್ಥಿತರಿದ್ದರು.



ಸಾಂತೂರ್ ಡಾ. ದಿವಾಕರ್ ರಾವ್ ಹಾಗೂ ಶ್ರೀಮತಿ ಸ್ನೇಹಲತಾ ರಾವ್‌ರವರ ಪುತ್ರ ಶ್ರೀ ಅಮರ್‌ದೀಪ್ ಹಾಗೂ ಶ್ರೀಮತಿ ತನುಜಾ ದಂಪತಿಗಳು ತಮ್ಮ ಪುತ್ರ ಡಾ. ಹೇಮಂತ್ ಮತ್ತು ಡಾ. ಅನನ್ಯ ವಿವಾಹದ ಶುಭಸಂದರ್ಭದಲ್ಲಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯಕ್ಕೆ ರೂಪ್ಾಯ 50,000/– ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಉಪಸ್ಥಿತರಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರು ಉಜ್ಜೋಡಿ ನಿವಾಸಿ ಶ್ರೀ ಭುಜಂಗ ರಾವ್ ತನ್ನ ಭೀಮರಥ ಶಾಂತಿ ಶುಭಸಮಾರಂಭದ ಪ್ರಯುಕ್ತ ತನ್ನ ಪತ್ನಿ ಶ್ರೀಮತಿ ಸುನೀಲಾ ರಾವ್, ಪುತ್ರ ಶ್ರೀ ಸೂರ್ಯನಾರಾಯಣ ರಾವ್, ಪುತ್ರಿಯರಾದ ಶ್ರೀಮತಿ ಸ್ವಪ್ನಾಗಂಧ ಗಿರೀಶ್, ಶ್ರೀಮತಿ ಸೌಮ್ಯ ಗಣೇಶ್ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯಕ್ಕೆ ರೂಪ್ಯಾ 25,000/– ದೇಣಿಗೆ ನೀಡಿದ್ದಾರೆ. ಈ ಹಿಂದೆಯೂ ಅವರು ರೂ. 50,000/– ದೇಣಿಗೆ ನೀಡಿದ್ದರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

---

**'ಶಿವಸದನ' ವಸತಿನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ರೂ. 1,10,41,998/– ಸಾಲ ಬಾಕಿ ಇರುತ್ತದೆ. ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಅವರಿಗೆ ಮಿತದರದಲ್ಲಿ ಸಸ್ಯಾಹಾರಿ ಊಟೋಪಚಾರ ಲಭ್ಯವಿರುತ್ತದೆ. ಅಪೇಕ್ಷಿತರಿಗೆ ಮಾಹಿತಿನೀಡಿ ಸಹಕರಿಸಿ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ – 7337634359 ಶ್ರೀ ಪಿ. ಶ್ರೀಕಾಂತ್ ರಾವ್ – 7795116598**

## ಶುಭವಿವಾಹ

ಹಿರಿಯಡಕ ಅಳುಗ್ಗೇಲು ಶ್ರೀ ಜಗದೀಶ್ ರಾವ್ ಮತ್ತು ಶ್ರೀಮತಿ ಅನಿತಾ ರಾವ್ ಇವರ ಪುತ್ರಿ **ಚಿ। ಸೌ। ಅರ್ಪಿತಾ** ಹಾಗೂ ಬಪ್ಪನಾಡು ಶ್ರೀ ದಿನಮಣಿ ಮತ್ತು ಶ್ರೀಮತಿ ಜ್ಯೋತಿಯವರ ಪುತ್ರ **ಚಿ। ಪ್ರಣವ್** ಇವರ ವಿವಾಹ ತಾ. 15–12–2023ನೇ ಶುಕ್ರವಾರ ಉಡುಪಿಯ 'ಶಾರದಾ ಮಂಟಪ'ದಲ್ಲಿ ನಡೆಯಿತು.

❋ ❋ ❋

ಕಡಬ ಡಾ. ಜಯಪ್ರಕಾಶ ರಾವ್ ಹಾಗೂ ಶ್ರೀಮತಿ ಸ್ವಪ್ನ ಇವರ ಪುತ್ರಿ **ಚಿ। ಸೌ। ನಂದಿತಾ** ಮತ್ತು ಡಾ. ಎನ್. ಸಂದೀಪ್ ಶಾಸ್ತ್ರೀ ಮತ್ತು ಶ್ರೀಮತಿ ಶೈಲಜಾರವರ ಪುತ್ರ **ಚಿ। ಸಂಜಲ್** ಇವರ ವಿವಾಹ ತಾ. 25–12–2023ನೇ ಸೋಮವಾರ ಉಡುಪಿಯ 'ಶಾರದಾ ಮಂಟಪ'ದಲ್ಲಿ ನಡೆಯಿತು.

❋ ❋ ❋

ಮೈಸೂರಿನ ಶ್ರೀ ಎಂ. ದಿವಾಕರ್ ರಾವ್ ಮತ್ತು ಶ್ರೀಮತಿ ಪದ್ಮಾರವರ ಪುತ್ರ **ಚಿ। ಕಾರ್ತಿಕೇಯ** ಹಾಗೂ ಚಿತ್ರಾಪುರ ಶ್ರೀ ಆನಂದ ರಾವ್ ಮತ್ತು ಶ್ರೀಮತಿ ನಳಿನಿಯವರ ಪುತ್ರಿ **ಚಿ। ಸೌ। ಮಾನಸ** ಇವರ ವಿವಾಹ ತಾ. 21–12–2023ನೇ ಗುರುವಾರ ಕುಳಾಯಿಯ ವಿಷ್ಣುಮೂರ್ತಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನಡೆಯಿತು.

❋ ❋ ❋

ಕೊಕ್ರಾಡಿ ಶ್ರೀ ಯಜ್ಞೇಶ್ ರಾವ್ ಮತ್ತು ಶ್ರೀಮತಿ ಸುನಂದಾ ಇವರ ಪುತ್ರ **ಚಿ। ಅನಿಲ್ ಕುಮಾರ್** ಹಾಗೂ ಬ್ರಹ್ಮಾವರ ಶ್ರೀ ಚಂದ್ರಶೇಖರ ಮತ್ತು ಶ್ರೀಮತಿ ವಿಜಯಲಕ್ಷ್ಮೀಯವರ ಪುತ್ರಿ **ಚಿ। ಸೌ। ರಮ್ಯಾ** ಇವರ ವಿವಾಹ ಬ್ರಹ್ಮಾವರದ ಮಟಪಾಡಿಯಲ್ಲಿ ಇತ್ತೀಚೆಗೆ ನಡೆಯಿತು.

ಸಾಂತೂರ್ ಶ್ರೀ ಅಮರ್‌ದೀಪ್ ಹಾಗೂ ಶ್ರೀಮತಿ ತನುಜಾರವರ ಪುತ್ರ **ಚಿ। ಡಾ. ಹೇಮಂತ್** ಮತ್ತು ಶ್ರೀ ಪಿ. ರವೀಂದ್ರ ಹೇರಳೆ ಹಾಗೂ ಶ್ರೀಮತಿ ಸುಮನಾರವರ ಪುತ್ರಿ **ಚಿ। ಸೌ। ಡಾ. ಅನನ್ಯ** ಇವರ ವಿವಾಹ ತಾ. 14–12–2023ನೇ ಗುರುವಾರ ಬ್ರಹ್ಮಾವರದ 'ಶಾಮಿಲಿ ಶಹಾನಾಯ್ ಸಭಾಂಗಣ'ದಲ್ಲಿ ನಡೆಯಿತು.

❋ ❋ ❋

ಶ್ರೀಮತಿ ಉಷಾ ಮತ್ತು ಕಾಪು ಶ್ರೀ ಮುರಳೀಧರ್ ರಾವ್ ಇವರ ಸುಪುತ್ರ **ಚಿ। ಭರತ್ ರಾವ್** ಹಾಗೂ ಶ್ರೀಮತಿ ಮಲ್ಲಿಕಾ ಮತ್ತು ದಿ। ಹೆಮ್ಮಾಡಿ ಪ್ರದೀಪ್ ಹೆಬ್ಬಾರ್‌ರವರ ಸುಪುತ್ರಿ **ಚಿ। ಸೌ। ತೇಜಸ್ವಿನಿ** ಇವರ ವಿವಾಹ ತಾ. 8–1–2024ನೇ ಸೋಮವಾರ ಸಾಲಿಗ್ರಾಮದ 'ಗುರುನರಸಿಂಹ ಸಭಾಭವನ'ದಲ್ಲಿ ನಡೆಯಿತು.

❋ ❋ ❋

ಕಂಬದಕೋಣೆ ಶ್ರೀ ನರಸಿಂಹ ರಾವ್ ಮತ್ತು ಶ್ರೀಮತಿ ಶ್ರೀಲತಾರವರ ಸುಪುತ್ರ **ಚಿ। ಪ್ರೀತಿಶ್ ರಾವ್** ಹಾಗೂ ಡಾ. ಕೆ. ಎನ್. ಸುಬ್ರಹ್ಮಣ್ಯ ಮತ್ತು ಡಾ। ಶ್ರೀಲಕ್ಷ್ಮೀಯವರ ಸುಪುತ್ರಿ **ಚಿ। ಸೌ। ಸುಹಾನ** ಇವರ ವಿವಾಹ ತಾ. 14–12–2023ನೇ ಗುರುವಾರ ಬೆಂಗಳೂರಿನ 'ಜ್ಞಾನಭಾರತೀ ಸಮುದಾಯ ಭವನ'ದಲ್ಲಿ ಜರುಗಿತು.

## ಉಪನಯನ



ಶ್ರೀಮತಿ ರಮಿತಾ ಮತ್ತು ಶ್ರೀ ಪ್ರೀತಮ್‌ರವರ ಸುಪುತ್ರ **ಚಿ। ಸಮರ್ಥ**ನ ಉಪನಯನ ತಾ. 29–12–2023ನೇ ಶುಕ್ರವಾರ ಮಂಗಳೂರು 'ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಂಗಣ'ದಲ್ಲಿ ಜರುಗಿತು.

ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*



# ಪುಸ್ತಕ ಬಿಡುಗಡೆ ಕಾರ್ಯಕ್ರಮ



'ಸಾಹಿತ್ಯ ಆಸಕ್ತಿ ಎಲ್ಲರಿಗೂ ಇರುವಂತಹ ಕಲೆ ಅಲ್ಲ. ಸಾಹಿತ್ಯಪ್ರೀತಿ ಒಮ್ಮೆ ಬೆಳೆಸಿಕೊಂಡರೆ ಅದು ಜೀವನಪರ್ಯಂತ ಗಟ್ಟಿಯಾಗಿ ನಿಲ್ಲುತ್ತದೆ. ಇದಕ್ಕೆ ಉದಾಹರಣೆ ವಯೋವೃದ್ಧರು, ಜ್ಞಾನವೃದ್ಧರೂ ಆಗಿರುವ ಶ್ರೀಮತಿ ಇಂದಿರಾ ಹಾಲಂಬಿಯವರು ಹಾಗೂ ಶ್ರೀಮತಿ ಸಾವಿತ್ರಿ ಮನೋಹರ್. ಇವರಿಬ್ಬರು ಪುಸ್ತಕ ಲೇಖಕರಾಗಿ ಪುಸ್ತಕ ಪ್ರಕಾಶಕರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವುದು ಆದರಣೀಯ ಆದರ್ಶಪ್ರಾಯವಾಗಿದೆ. ಸರಕಾರ ಪುಸ್ತಕ ಲೇಖಕರಿಗೆ ಯಾವುದೇ ರೀತಿಯ ಪ್ರೋತ್ಸಾಹ ನೀಡದಿರುವುದು ವಿಷಾದನೀಯ. ಆದರೂ ನಿವೃತ್ತ ಶಿಕ್ಷಕರು ಇಬ್ಬರು ತಮ್ಮ ಪಿಂಚಣಿ ಹಣದಲ್ಲಿ ಪುಸ್ತಕ ಬರೆದು, ಪ್ರಕಾಶಿಸಿ, ಸಾಹಿತ್ಯಕೃಷಿಯಲ್ಲಿ ತೊಡಗಿಕೊಂಡಿರುವುದು ಕಿರಿಯರಿಗೆ ಮಾರ್ಗದರ್ಶಿಯಾಗಿದೆ... ಇಂದಿರಾ ಹಾಲಂಬಿ ಅವರ ಎರಡು ಪೌರಾಣಿಕ ಕೃತಿಗಳು ಹಾಗೂ ಸಾವಿತ್ರಿ ಮನೋಹರ್ ಅವರ ನಾಟಕ ಸಂಗ್ರಹ ಯೋಗ್ಯವಾಗಿವೆ. ಈ ಪುಸ್ತಕಗಳನ್ನು ಕೊಂಡು ಓದುವವರು ಹೆಚ್ಚಾಗಲಿ ಎಂದು ಹಾರೈಸುತ್ತೇನೆ' ಎಂದು ಕರ್ನಾಟಕ ರಾಜ್ಯ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಪುನರೂರು ದೇವಸ್ಥಾನದ ಧರ್ಮದರ್ಶಿಗಳು ಆಗಿರುವ ಡಾ। ಹರಿಕೃಷ್ಣ ಪುನರೂರು ಅವರು ನುಡಿದರು.

ಸಂದೀಪ ಸಾಹಿತ್ಯ ಪ್ರಕಾಶನದ ಎರಡು ಪುಸ್ತಕಗಳು ಹಾಗೂ ಪುನ್ನಾಗ ಪ್ರಕಾಶನ ಕಾರ್ಕಳ ಇದರ ಒಂದು ನಾಟಕ ಕೃತಿಯನ್ನು ಬಿಡುಗಡೆಗೊಳಿಸಿ ಶುಭಹಾರೈಸಿದರು. ಯುಗಪುರುಷ ಕಿನ್ನಿಗೋಳಿ ಇದರ ಶ್ರೀ ಭುವನಾಭಿರಾಮ ಉಡುಪರು ಸಾಹಿತಿಗಳಿಗೆ ಶುಭಹಾರೈಸಿದರು. ಲೇಖಕರೂ, ಮಕ್ಕಳ ಸಾಹಿತ್ಯ ಸಂಗಮದ ಗೌರವಾಧ್ಯಕ್ಷರೂ, ಕಾರ್ಯಕ್ರಮದ ಪ್ರಾಯೋಜಕರೂ ಆದ ಡಾ. ಹರಿಕೃಷ್ಣ ಪುನರೂರ್ ಅವರನ್ನು ಸನ್ಮಾನಿಸಿದರು. ಶ್ರೀಮತಿ ಜಯಶ್ರೀ ಮುರಳೀಧರ ಹಾಲಂಬಿ ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಮಕ್ಕಳ ಸಾಹಿತ್ಯ ಸಂಗಮದ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಭಟ್ ಬೆಳಾಲು ಅವರು ಸರ್ವರನ್ನು ಸ್ವಾಗತಿಸಿದರು. ಲೇಖಕಿಯರು ತಮ್ಮ ಪುಸ್ತಕ ರಚನೆ ಕುರಿತು ಮನದಾಳದ ಮಾತು ನುಡಿದರು. ಇಂದಿರಾ ಹಾಲಂಬಿಯವರ ಪುಸ್ತಕವನ್ನು ಶ್ರೀಯುತ ನಾರಾಯಣ ಮಡಿ ಕುಂದಾಪುರ. ಶ್ರೀಮತಿ ಸಾವಿತ್ರಿ ಮನೋಹರ ಇವರ ಪುಸ್ತಕವನ್ನು ಶ್ರೀಮತಿ ವಸಂತಿ ಕಡಂಬಳ ಕಾರ್ಕಳ ಇವರು ಪರಿಚಯ ಮಾಡಿದರು. ವೇದಿಕೆಯಲ್ಲಿ ಸಂಗಮದ ಕಾರ್ಯದರ್ಶಿ ಶ್ರೀ ರಮೇಶ್ ಭಟ್ ಉಪಸ್ಥಿತರಿದ್ದರು. ಜೊತೆ ಕಾರ್ಯದರ್ಶಿ ಶ್ರೀಮತಿ ಸಾವಿತ್ರಿ ಭಟ್ ಇವರು ಕಾರ್ಯಕ್ರಮ ನಿರ್ವಹಿಸಿ ಧನ್ಯವಾದ ಸಲ್ಲಿಸಿದರು.

# ಶ್ರಮದಾನ



ಕೊಕ್ರಾಡಿ ಶ್ರೀ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಠಾರ ಶುಚಿತ್ವವನ್ನು ಷಷ್ಠಿ ಮಹೋತ್ಸವಕ್ಕೆ ಪೂರ್ವಭಾವಿಯಾಗಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ ಇದರ ಸುಮಾರು 50 ಸದಸ್ಯರು ದಿನಾಂಕ 10–12–2023ರಂದು ಶ್ರಮದಾನದ ಮೂಲಕ ನೆರವೇರಿಸಿದರು. ಆಡಳಿತ ಮೊಕ್ತೇಸರರಾದ ಶ್ರೀ ಅರುಣಕುಮಾರ್ ಹಾಗೂ ಅರ್ಚಕರಾದ ಶ್ರೀ ಸುಬ್ರಹ್ಮಣ್ಯ ಭಟ್ ಇವರು ದೇವರ ಪ್ರಸಾದ ನೀಡಿ ಷಷ್ಠಿ ಮಹೋತ್ಸವಕ್ಕೂ ಎಲ್ಲರೂ ಬರುವಂತೆ ಆಹ್ವಾನಿಸಿ ಕೃತಜ್ಞತೆ ಸಲ್ಲಿಸಿದರು.

# ಸನ್ಮಾನ



ಸರಕಾರಿ (ಫಿಶರೀಸ್) ಹಿರಿಯ ಪ್ರಾಥಮಿಕ ಶಾಲೆ, ಚಿತ್ರಾಪುರ, ಕುಳಾಯಿ ಇಲ್ಲಿಯ ಶಾಲೆಯಲ್ಲಿ ತಾ. 16–12–2023ನೇ ಶನಿವಾರ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂದರ್ಭದಲ್ಲಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ದಂಪತಿಗಳನ್ನು ಶಾಲಾ ಶಿಕ್ಷಕ ವೃಂದ ಮತ್ತು ಹಳೆ ವಿದ್ಯಾರ್ಥಿ ಸಂಘದವರು ಸೇರಿ ಸನ್ಮಾನ ಮಾಡಿದರು.

M.Devanand bhat
Mob: 9845644556
9663993883
Shobha Digital STUDIO
Belavai 08258-276177
Moodabidri 9901995655
Yedapadavu 0824-2256374
mdevanandbhat@gmail.com

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

PREETHIKA AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building
Nr. Postoffice, Padubidri - 574 111
Opp. Busstand
Belman
All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಕೆಳಗಿನ ನಾವೂರು ಶ್ರೀ ಸದಾಶಿವ ಶರ್ಮ ಮತ್ತು ಶ್ರೀಮತಿ ಸ್ವರ್ಣಲತಾ ಶರ್ಮ ಸ್ಮರಣಾರ್ಥ ಅವರ ಪುತ್ರ ಬೆಂಗಳೂರು / ದುಬೈ ನಿವಾಸಿ ಶ್ರೀ ರಾಜಶೇಖರ ಶರ್ಮ ಮತ್ತು ಶ್ರೀಮತಿ ಅನುಪಮಾ ಶರ್ಮ ದಂಪತಿಗಳು ತಮ್ಮ ಪುತ್ರ ಶ್ರೀ ಅರ್ಪಿತ್ ಶರ್ಮ ಮತ್ತು ಸೊಸೆ ಶ್ರೀಮತಿ ಸ್ನೇಹಾ ಶರ್ಮ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯಕ್ಕೆ ₹ **5,00,000/-** (ರೂಪಾಯಿ ಐದು ಲಕ್ಷ) ನೀಡಿ ಒಂದು ಕೊಠಡಿಯನ್ನು ಪ್ರಾಯೋಜಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ಸಂತೋಷ್ ಯು., ಶ್ರೀಮತಿ ಸ್ನೇಹಲತಾ ದಿವಾಕರ್ ಉಪಸ್ಥಿತರಿದ್ದರು.






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur*
*Printed at : Rajesh Power Press, Darbe - 574 202, Puttur, D. K.*